# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸಚಿವರುಗಳು, ಸರ್ಕಾರದ ಮುಖ್ಯ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಮೊಬೈಲ್ ದೂರವಾಣಿ ಸೌಲಭ್ಯವನ್ನು ಒದಗಿಸುವ ಬಗ್ಗೆ

ಓದಲಾಗಿದೆ:
1) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 30 (ಎ) ಡಿಟಿಎನ್ 2003 ದಿನಾಂಕ: 26-5-2003
2) ಅಲ್ಪಾವಧಿ ಟೆಂಡರ್ ಅಧಿಸೂಚನೆ ಸಂಖ್ಯೆ: ಸಿಆಸುಇ 30 ಡಿಟಿಎನ್ 2003 ದಿನಾಂಕ: 16-6-2003
3) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 30 ಡಿಟಿಎನ್ 2003 (ಭಾಗ) ದಿನಾಂಕ: 9-7-2003

**********

ಪ್ರಸ್ತಾವನೆ:

ಮೇಲಿನ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಎಲ್ಲಾ ಸಚಿವರುಗಳು ಮತ್ತು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ಅದಕ್ಕಿಂತ ಮೇಲ್ಪಟ್ಟ ದರ್ಜೆಯ ಅಧಿಕಾರಿಗಳಿಗೆ ಮೊಬೈಲ್ ದೂರವಾಣಿ ಸೌಲಭ್ಯವನ್ನು ಒದಗಿಸಲು ಮತ್ತು ಈ ಸಂಬಂಧ ಮೊಬೈಲ್ ದೂರವಾಣಿ ಉಪಕರಣ, ಸೇವೆ, ಸಿಮ್ ಕಾರ್ಡ್ (SIM card) ವೆಚ್ಚ ಮುಂತಾದ ಎಲ್ಲಾ ವೆಚ್ಚಗಳು ಸೇರಿದಂತೆ ಪ್ರತಿ ಪ್ರಕರಣಕ್ಕೆ ರೂ. 10,000-00 ಮಿತಿಗೆ ಒಳಪಟ್ಟು ಟೆಂಡರ್ ಕರೆದು ಅತ್ಯಂತ ಕಡಿಮೆ ದರದಲ್ಲಿ ಒದಗಿಸುವ ಸಂಸ್ಥೆಯ ಮುಖಾಂತರ ಈ ಸೌಲಭ್ಯವನ್ನು ಒದಗಿಸಲು ಆದೇಶಿಸಲಾಗಿತ್ತು. ಅಲ್ಲದೇ ಸಚಿವರುಗಳು ಮತ್ತು ಮುಖ್ಯ ಕಾರ್ಯದರ್ಶಿಗಳಿಗೆ ಮಾಸಿಕ ರೂ. 5,000-00 ಮತ್ತು ಇತರರಿಗೆ ರೂ.3,000-00 ವೆಚ್ಚದ ಮಿತಿಯನ್ನು ಸಹ ಸೂಚಿಸಲಾಗಿತ್ತು. ಅದರಂತೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿತ್ತು. ಸದರಿ ಪ್ರಕಟಣೆಗೆ ಸ್ಪಂದಿಸಿ ಒಟ್ಟು 7 ಸಂಸ್ಥೆಗಳು ನಿಗದಿತ ಅವಧಿಯೊಳಗೆ ಟೆಂಡರ್‌ಗಳನ್ನು ಸಲ್ಲಿಸಿದ್ದವು. ಟೆಂಡರ್‌ನಲ್ಲಿ ಭಾಗವಹಿಸಿದವರು ವಿವಿಧ ಮಾದರಿಯ ಉಪಕರಣ ಮತ್ತು ವಿವಿಧ ಕರೆಗಳು ಹಾಗೂ ವಿವಿಧ ಪ್ರಮಾಣದ ಕರೆಗಳಿಗೆ ದರಗಳನ್ನು ಪ್ರಸ್ತಾಪಿಸಿದ್ದರು. ಅಲ್ಲದೇ ವಿವಿಧ ನಮೂನೆಯ ಉಪಕರಣಗಳಿಗೆ ಬೆಲೆಗಳನ್ನು ನಮೂದಿಸಿದ್ದರು. ಈ ಎಲ್ಲಾ ಟೆಂಡರ್‌ಗಳಲ್ಲಿರುವ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಉತ್ತಮ ಗುಣಮಟ್ಟದ ಮೊಬೈಲ್ ದೂರವಾಣಿ ಉಪಕರಣ ಹಾಗೂ ಕರೆಗಳ ವೆಚ್ಚ ಮತ್ತು ಇನ್ನಿತರ ವೆಚ್ಚಗಳನ್ನು ಅತ್ಯಂತ ಕಡಿಮೆ ದರದಲ್ಲಿ ವಿಧಿಸುವ ಸಂಸ್ಥೆಯನ್ನು ಗುರುತಿಸಲು ಈ ಕೆಳಕಂಡ ಉನ್ನತ ಅಧಿಕಾರಿಗಳನ್ನು ಒಳಗೊಂಡ ಒಂದು ಸಮಿತಿಯನ್ನು ಮೇಲೆ ಕ್ರಮ ಸಂಖ್ಯೆ: (3)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ರಚಿಸಲಾಯಿತು:-

1) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ
2) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
3) ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ)
4) ಸರ್ಕಾರದ ಕಾರ್ಯದರ್ಶಿ, ಸಿಆಸುಇ (ಇ-ಆಡಳಿತ)

ಈ ಸಮಿತಿಯು ಮೊಬೈಲ್ ದೂರವಾಣಿ ಸಂಸ್ಥೆಗಳು ನೀಡುವ ದರಗಳು ಎಂದರೆ ಮೊಬೈಲ್‌ನಿಂದ ಸ್ಥಿರ ದೂರವಾಣಿಗೆ ಮಾಡುವ ಕರೆಗಳು, ಮೊಬೈಲ್‌ನಿಂದ ಮೊಬೈಲ್ ಮತ್ತು ಇತರ ಸ್ಥಳಗಳಿಗೆ ಮಾಡುವ ಕರೆಗಳು ಅಲ್ಲದೇ ರೋಮಿಂಗ್ ಸೌಲಭ್ಯ ಮುಂತಾದವುಗಳಿಗೆ ನಿಗದಿಪಡಿಸಿರುವ ದರಗಳನ್ನು ಮತ್ತು [illegible] ದರಗಳನ್ನು ಹಾಗೂ ಸಚಿವರು ಮತ್ತು ಅಧಿಕಾರಿಗಳಿಗೆ ಮಾಸಿಕ ನಿಗದಿಪಡಿಸಿರುವ ವೆಚ್ಚದ ಗರಿಷ್ಠ ಮಿತಿಯನ್ನು ಸಹ ಗಮನಕ್ಕೆ ತೆಗೆದುಕೊಂಡು ವಿವರವಾಗಿ ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಶಿಫಾರಸ್ಸು ಮಾಡಿರುತ್ತದೆ:-

" a) M/s-Spice Telecom should be selected as the service provider and it should be made compulsory that all the Ministers and officers should use the Spice Telecom sim card on their instruments so that maximum facilities can be obtained.

b) Ministers' and officers may be given an option to choose their own cell phone for which Government will reimburse the actual cost up to a maximum of Rs.10,000/- or opt for Sony Erricsson T310 which is being recommended by the Committee for purchase from M/s. Pick N Speak, No.16, K.H. Road, Bangalore -27. "

ಈ ಮಧ್ಯೆ ಸರ್ಕಾರದ ಕಾರ್ಯದರ್ಶಿಗಳಿಗೂ ಮೊಬೈಲ್ ದೂರವಾಣಿ ಸೌಲಭ್ಯವನ್ನು ಮಾಸಿಕ ವೆಚ್ಚ ರೂ. 3,000-00 ಮಿತಿಗೆ ಒಳಪಟ್ಟು ನೀಡಬೇಕೆಂದು ತೀರ್ಮಾನಿಸಲಾಗಿದೆ. ಕಾರಣ, ಈ ಆದೇಶ.

<u>ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 30 ಡಿಟಿಎನ್ 2003, ಬೆಂಗಳೂರು,</u>
<u>ದಿನಾಂಕ:12-8-2003</u>
<u>(ಯುನಿಕ್ ಸಂಖ್ಯೆ: 147 / 2003)</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸಚಿವರುಗಳು, ಸರ್ಕಾರದ ಮುಖ್ಯ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಮೊಬೈಲ್ ದೂರವಾಣಿ ಸೌಲಭ್ಯವನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಒದಗಿಸಲು ಈ ಮೂಲಕ ಮಂಜೂರಾತಿ ನೀಡಲಾಗಿದೆ.

2. ಸಚಿವರು ಮತ್ತು ಅಧಿಕಾರಿಗಳಿಗೆ "ಸ್ಪೈಸ್ ಟೆಲಿಕಾಂ" ಸಂಸ್ಥೆಯ ಮೂಲಕ ಮೊಬೈಲ್ ದೂರವಾಣಿ ಸಂಪರ್ಕವನ್ನು ಹಾಗೂ "ಪಿಕ್ ಎನ್ ಸ್ಪೀಕ್" ಬೆಂಗಳೂರು ಸಂಸ್ಥೆಯ ಮೂಲಕ

ಮೊಬೈಲ್ ದೂರವಾಣಿ ಉಪಕರಣವನ್ನು ಕ್ರಮವಾಗಿ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧ-1 ಮತ್ತು 2 ರಲ್ಲಿನ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಪಡೆದು/ಖರೀದಿಸಿ ಒದಗಿಸಲು ಆದೇಶಿಸಲಾಗಿದೆ.

3. ಸರ್ಕಾರದ ಕಾರ್ಯದರ್ಶಿಗಳ ಮೊಬೈಲ್ ದೂರವಾಣಿಗೆ ಮಾಸಿಕ ರೂ. 3,000-00 (ರೂಪಾಯಿ ಮೂರು ಸಾವಿರಗಳು ಮಾತ್ರ) ಕರೆಗಳ ವೆಚ್ಚದ ಮಿತಿಯನ್ನು ವಿಧಿಸಲಾಗಿದೆ.

4. ನಿಗದಿಪಡಿಸಿರುವ ಮಾಸಿಕ ವೆಚ್ಚಕ್ಕಿಂತ ಹೆಚ್ಚಿಗೆ ಕರೆಗಳ ವೆಚ್ಚದ ಬಿಲ್ಲು ಬಂದಲ್ಲಿ ಅಂತಹ ಹೆಚ್ಚುವರಿ ವೆಚ್ಚವನ್ನು ಸಂಬಂಧಿಸಿದ ಸಚಿವರು, ಅಧಿಕಾರಿಯವರು ಸರ್ಕಾರಕ್ಕೆ ಪಾವತಿ ಮಾಡಿ ಅದರ ಚಲನ್‌ನ ಪ್ರತಿಯೊಂದಿಗೆ ಬಿಲ್ಲನ್ನು ಸಿಆಸುಇ(ಕಾರ್ಯಕಾರಿ)ಗೆ ಮುಂದಿನ ಕ್ರಮಕ್ಕಾಗಿ ಕಳುಹಿಸತಕ್ಕದ್ದು. ಸಿಆಸುಇ (ಕಾರ್ಯಕಾರಿ) ವಿಭಾಗವು ಒಟ್ಟು ಬಿಲ್ಲಿನ ಮೊತ್ತವನ್ನು ಸಂಬಂಧಿಸಿದ ಸಂಸ್ಥೆಗೆ ಪಾವತಿಸಲು ಕ್ರಮ ತೆಗೆದುಕೊಳ್ಳುವುದು. ಹೆಚ್ಚುವರಿ ಬಿಲ್ಲಿನ ಮೊತ್ತವನ್ನು ಪಾವತಿ ಮಾಡದೇ ಕಳುಹಿಸುವ ಬಿಲ್ಲಿನ ಮೊತ್ತವನ್ನು ಯಾವುದೇ ಕಾರಣಕ್ಕೂ ಸಿಆಸುಇ ಪಾವತಿ ಮಾಡುವುದಿಲ್ಲ. ತತ್ಪರಿಣಾಮವಾಗಿ ಸಂಪರ್ಕ ಕಡಿತಗೊಂಡಲ್ಲಿ ಅದಕ್ಕೆ ಅವರೇ ಜವಾಬ್ದಾರರು ಹಾಗೂ ಮರು-ಸಂಪರ್ಕ ವೆಚ್ಚ ಮತ್ತು ವಿಳಂಬ ಪಾವತಿ ಶುಲ್ಕವನ್ನು ಸಂಬಂಧಪಟ್ಟವರೇ ಪಾವತಿ ಮಾಡತಕ್ಕದ್ದು.

5. ಸರ್ಕಾರವು "ಸೋನಿ ಎರಿಕ್‌ಸನ್-ಟಿ 310" ಮಾದರಿಯ ಮೊಬೈಲ್ ದೂರವಾಣಿ ಉಪಕರಣವನ್ನು ಪ್ರತಿ ಉಪಕರಣಕ್ಕೆ ರೂ.9,100-00 (ರೂಪಾಯಿ ಒಂಭತ್ತು ಸಾವಿರದ ಒಂದು ನೂರು ಮಾತ್ರ) ರಂತೆ "ಮೆ: ಬಿಲ್ ಎನ್ ಸ್ಟೀಕ್" ಸಂಸ್ಥೆಯ ಮುಖಾಂತರ ಸಿಆಸು ಇಲಾಖೆಯಿಂದ ಖರೀದಿಸಿ ಒದಗಿಸುವುದು. ಒಂದು ವೇಳೆ ಸಚಿವರು/ಅಧಿಕಾರಿಯು ಇನ್ಯಾವುದೇ ಉಪಕರಣವನ್ನು ಉಪಯೋಗಿಸಲು ಅಪೇಕ್ಷಿಸಿದಲ್ಲಿ ಅದನ್ನು ರೂ 10,000-00 (ರೂಪಾಯಿ ಹತ್ತು ಸಾವಿರಗಳು ಮಾತ್ರ) ಮಿತಿಗೆ ಒಳಪಟ್ಟು ಅವರೇ ನಿಯಮಾನುಸಾರ ಖರೀದಿಸಿ ನಂತರ ಬಿಲ್ಲನ್ನು ಮರುಪಾವತಿಗಾಗಿ ಸಿಆಸುಇ (ಕಾರ್ಯಕಾರಿ)ಗೆ ಕಳುಹಿಸತಕ್ಕದ್ದು, "ಸೋನಿ ಎರಿಕ್‌ಸನ್ -ಟಿ310" ಉಪಕರಣವು ಬೇಕೆಂದಲ್ಲಿ ಮತ್ತು ಆ ಬಗ್ಗೆ ತಿಳಿಸಿದಲ್ಲಿ, ಸಿಆಸುಇ (ಕಾರ್ಯಕಾರಿ) ವಿಭಾಗವು ಅದನ್ನು "ಮೆ: ಬಿಲ್ ಎನ್ ಸ್ಟೀಕ್" ಬೆಂಗಳೂರು, ಇವರಿಂದ ಖರೀದಿಸಿ ಒದಗಿಸುವುದು.